

ಚಿತ್ರ : ೩೦

ಈ ಚಿತ್ರದಲ್ಲಿ ಸ್ವಾಮೀಜಿಯವರ ಸುಕೋಮಲ ನೋಟ, ಪ್ರಶಾಂತಿ ಮತ್ತು ಸೌಮ್ಯತೆಗಳು ಬಹಳ ಸುಂದರವಾಗಿ ಅಭಿವ್ಯಕ್ತವಾಗಿವೆ ಎಂದು ಸೋದರಿ ಗಾರ್ಗಿ ತಮ್ಮ ಕೃತಿಯಲ್ಲಿ ಉದ್ಗರಿಸಿದ್ದಾರೆ. ಈ ಚಿತ್ರ, ನಂ. ೨೧ ಮತ್ತು ನಂ. ೨೩ ರಿಂದ ೨೬ – ಈ ಚಿತ್ರಗಳು ಶಿಕಾಗೊವಿನ ವೇದಾಂತ ಸೊಸೈಟಿಯ ಮುಖ್ಯಸ್ಥರಾಗಿದ್ದ ಸ್ವಾಮಿ ವಿಶ್ವಾನಂದಜಿ ಅವರಿಗೆ (೧೯೩೭– ೬೫), ಸ್ವಾಮೀಜಿಯವರ ಅನುಯಾಯಿಯಾಗಿದ್ದ ಮೆಕ್‌ಕಿಂಡ್ಲೆ ಸೋದರಿಯರಲ್ಲಿ ಒಬ್ಬಾಕೆಯ ಮೊಮ್ಮಗನ ಮೂಲಕ, ಆಕಸ್ಮಿಕವಾಗಿ ದೊರಕಿತು.

**ಛಾಯಾಚಿತ್ರ – ೩೦**

ಈ ಚಿತ್ರದಲ್ಲಿ ಕಾಣಬರುವ ದೃಶ್ಯ ಇದು: ಅಮೆರಿಕದ ಮೈನ್ (Main) ಎಂಬ ಊರಿನ ಗ್ರೀನ್‌ಎಕರ್ (Greenacare) ಪ್ರದೇಶದ ಪೈನ್ (Pine) ವೃಕ್ಷದ ಕೆಳಗೆ ಸ್ವಾಮೀಜಿ ಕುಳಿತಿದ್ದಾರೆ. ಅವರ ಶಿಷ್ಯವರ್ಗ ಸುತ್ತಲೂ ಆವರಿಸಿಕೊಂಡಿದೆ. ಗ್ರೀನ್‌ಎಕರ್ ಜಾಗದಲ್ಲಿ ಸ್ವಾಮೀಜಿ ಸ್ವಲ್ಪಕಾಲ ವೇದಾಂತ ತರಗತಿಗಳನ್ನು ನಡೆಸುತ್ತಿದ್ದರು.

೧೮೯೪ರಲ್ಲಿ ಕೋರಾ ಸ್ಟಾಕ್‌ಹ್ಯಾಮ್ (Cora Stockham) ಎಂಬುವವನು ಒಂದು ಛಾಯಾಚಿತ್ರವನ್ನು ತೆಗೆದನು ಎಂದು ಸ್ವಾಮೀಜಿ ಹೇಲ್ ಸಹೋದರಿಯರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಅದರ ಜೊತೆ ಒಂದು ಗುಂಪು ಚಿತ್ರವನ್ನು ಕಳಿಸಿಕೊಟ್ಟಿದ್ದಾರೆ. ಪ್ರಾಯಶಃ ಅವರು ಇದೇ ಚಿತ್ರವನ್ನೇ ಕಳಿಸಿಕೊಟ್ಟಿರಬೇಕು ಎಂದು ಊಹಿಸಲಾಗಿದೆ. ಬಾಸ್ಟನ್‌ನಲ್ಲಿನ ವೇದಾಂತ ಸೊಸೈಟಿಯ ಎಲ್ವಾ ನೆಲ್ಸನ್ ಎಂಬುವವರು ಈ ಚಿತ್ರವನ್ನು ಪತ್ತೆಹಚ್ಚಿದರು.

## ವಿವೇಕಾನಂದ ಘಟನಾವಳಿ

ವಿಶ್ವಧರ್ಮ ಸಮ್ಮೇಳನದಲ್ಲಿ ಮೊದಲನೆಯ ದಿನ ಸ್ವಾಮೀಜಿ ಐದು ನಿಮಿಷಗಳು ಮಾತ್ರ ಮಾತನಾಡಿದರು. ಅದರಿಂದ ಜಗದ್ವಿಖ್ಯಾತರಾದರು. ಅವರು ಉಪನ್ಯಾಸ ಮಾಡುವುದಕ್ಕೆ ಮುಂಚೆ ಅನಾಮಧೇಯರಾಗಿದ್ದರು. ಉಪನ್ಯಾಸ ಮಾಡಿ ಆದಮೇಲೆ ವೃತ್ತಪತ್ರಿಕೆಗಳಲ್ಲೆಲ್ಲ ಅವರ ಭಾವಚಿತ್ರವೇ, ಎಲ್ಲರ ಬಾಯಿಯಲ್ಲಿಯೂ ಅವರ ಹೆಸರೇ. ಉಪನ್ಯಾಸವಾದ ಮೇಲೆ ಸಹಸ್ರಾರು ಮಂದಿ ಮಹಿಳೆಯರು ಸ್ವಾಮೀಜಿಯವರ ನಿಲುವಂಗಿಯ ತುದಿಯನ್ನು ಮುಟ್ಟುವುದಕ್ಕೆ ಧಾವಿಸುತ್ತಿದ್ದುದನ್ನು ನೋಡಿದ ಒಬ್ಬ ಹಿರಿಯ ಮಹಿಳೆ ಹೀಗೆ ಹೇಳುತ್ತಾಳೆ: "ಮಗು, ನೀನು ಇದನ್ನು ಜಯಿಸಿದರೆ ಸಾಕ್ಷಾತ್ ದೇವರ ಮಗನೆ."

ಕೋಟ್ಯಾಧೀಶರು ಸ್ವಾಮೀಜಿಯವರನ್ನು ತಮ್ಮ ಮನೆಗೆ ಕರೆದೊಯ್ಯಲು ಸ್ಪರ್ಧಿಸುತ್ತಿದ್ದರು. ಅರಮನೆಯಂತಹ ಮನೆಗಳು, ಮೃಷ್ಟಾನ್ನ ಭೋಜನ, ಹಂಸತೂಲಿಕಾ ತಲ್ಪಗಳು ಇವರಿಗೆ ಕಾದಿದ್ದವು. ಆದರೆ ಸ್ವಾಮೀಜಿಯವರನ್ನು ಜನ ನಿಕೃಷ್ಟ ದೃಷ್ಟಿಯಿಂದ ನೋಡಿದಾಗ ಹೇಗೆ ನಿರಾಶರಾಗಲಿಲ್ಲವೋ ಹಾಗೆಯೇ ತಮ್ಮನ್ನು ಕೊಂಡಾಡುವಾಗಲೂ, ಅದರ ಅಮಲಿನಲ್ಲಿ ತಮ್ಮನ್ನು ಮರೆಯಲಿಲ್ಲ. ಸ್ವಾಮೀಜಿ ನಿರ್ಲಿಪ್ತರಾಗಿದ್ದರು. ಸ್ತುತಿನಿಂದೆಗಳಲ್ಲಿ ಸಮನಾಗಿದ್ದರು. (ಆಧಾರ)

# ಮನವೆಂಬ ಮರ್ಕಟನಿಗೆ ಸ್ವಾಮಿ ವಿವೇಕಾನಂದರ ಮದ್ದು

ಜಿ.ಎಸ್. ಜಯದೇವ



ವಿವೇಕಕಿರಣ

"ಮನಸು ಕಾರಣವಲ್ಲ ಪಾಪಪುಣ್ಯಕ್ಕೆಲ್ಲ ಅನಲಾಕ್ಷ ನಿನ್ನಯ ಪ್ರೇರಣೆ ಇಲ್ಲದೆ" ಎಂದು ಹರಿದಾಸರೊಬ್ಬರು ತಮ್ಮ ಮನಸ್ಸಿನ ಬಗ್ಗೆ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾರೆ. ಈ ಧಾಟಿಯಲ್ಲೇ ಭಕ್ತನೊಬ್ಬ ಮಾತನಾಡಿದಾಗ ಪರಮಹಂಸರು ಅವನನ್ನು ಛೇಡಿಸಿ ಹೇಳುತ್ತಾರೆ, "ಹೌದು, ಹೌದು. ದುರ್ಯೋಧನನೂ ಕೂಡ ಹೇಳುತ್ತಿದ್ದ, 'ಕೇಶವ, ನೀನು ನನ್ನ ಹೃದಯದಲ್ಲಿ ಕುಳಿತು ಪ್ರೇರೇಪಣೆ ಮಾಡಿದಂತೆ ನಾನು ನಡೆದುಕೊಂಡಿದ್ದೇನೆ' ಎಂದು." ದೇವರ ಮೇಲೆ ಜವಾಬ್ದಾರಿ ಹಾಕಿಬಿಟ್ಟರೆ ನಾವು ಮಾಡುವ ಕರ್ಮಗಳು ಉಂಟುಮಾಡುವ ಪರಿಣಾಮಗಳಿಂದ ತಪ್ಪಿಸಿಕೊಳ್ಳಲಾದೀತೆ? ದುರ್ಯೋಧನ ಕೊನೆಗೆ ತೊಡೆ ಮುರಿದುಕೊಂಡು ತನ್ನ ಕರ್ಮಕ್ಕೆ ತಕ್ಕ ಪ್ರತಿಫಲವನ್ನು ಅನುಭವಿಸಬೇಕಾಯಿತು. ಹೀಗೆ ಯಾರೂ ಕೂಡ ತಮ್ಮ ಮನಸ್ಸಿನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಧರ್ಮಪಾಲನೆಯೊಂದೇ ಈ ಸಮಸ್ಯೆಗೆ ಇರುವ ಏಕಮಾತ್ರ ಪರಿಹಾರ.

'ಧರ್ಮ' ಎಂದರೆ ಏನು? ಸ್ವಾಮಿ ವಿವೇಕಾನಂದರು ಸರಳವಾಗಿ ಹೀಗೆ ಹೇಳುತ್ತಾರೆ: "ಧರ್ಮ ಕಟುಕನನ್ನು ಮನುಷ್ಯನನ್ನಾಗಿ ಮಾಡುತ್ತದೆ ಮತ್ತು ಮನುಷ್ಯನನ್ನು ದೇವರನ್ನಾಗಿ ಮಾಡುತ್ತದೆ." ಅವರ ಮತ್ತೊಂದು ಜನಪ್ರಿಯ ಹೇಳಿಕೆ ಹೀಗಿದೆ: "ಒಳ್ಳೆಯವನಾಗಿರು, ಒಳ್ಳೆಯದನ್ನೇ ಮಾಡು. ಇದೇ ಧರ್ಮದ ಸಾರ." ಆದರೆ, ಪ್ರಪಂಚದ ಯಾವುದೇ ಧರ್ಮವನ್ನು ತೆಗೆದುಕೊಳ್ಳಿ. ಅವುಗಳಲ್ಲಿ ಪ್ರತಿಯೊಂದೂ, "ಇದನ್ನು ಮಾಡಬೇಡ, ಅದನ್ನು ಮಾಡಬೇಡ" ಎಂಬ ನಿಷೇಧಾತ್ಮಕ ಹೇಳಿಕೆಗಳಿಂದಲೇ ಪ್ರಾರಂಭವಾಗುತ್ತದೆ. ಇಂಥ ನಿಷೇಧಾತ್ಮಕ ಹೇಳಿಕೆಗಳು ಇಲ್ಲವೆಂದರೆ, 'ಧರ್ಮ' ಎನ್ನುವುದು ಇನ್ನೂ ಪ್ರಾರಂಭವೇ ಆಗಿಲ್ಲ ಎಂದು ಭಾವಿಸುವಷ್ಟು, ಈ ಬಗೆಯ ನಕಾರಾತ್ಮಕ ಹೇಳಿಕೆಗಳು ಧರ್ಮದಲ್ಲಿ ಪ್ರಧಾನವಾಗಿಬಿಟ್ಟಿವೆ. "ಹೀಗೆ ಮಾಡು, ಹಾಗೆ ಮಾಡಬೇಡ" ಎಂಬ ನಿಷೇಧಾತ್ಮಕ ಹೇಳಿಕೆಗಳಿಂದ ಮನುಷ್ಯ ಬದಲಾಗಬಲ್ಲನೆ? "ಇಲ್ಲ" ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು. ಅದನ್ನು ಅವರು ಹೀಗೆ ವಿವರಿಸುತ್ತಾರೆ: "ಪ್ರಪಂಚದ ಎಲ್ಲ ನೀತಿಬೋಧನೆಗಳನ್ನೇ ತೆಗೆದುಕೊಳ್ಳಿ. ಅವೆಲ್ಲ ಒಂದೇ ಬಗೆಯ ತಪ್ಪನ್ನು ಮಾಡುತ್ತಿವೆ. ಏನೆಂದರೆ ಅವು ಇದನ್ನು ಮಾಡಬೇಡ, ಅದನ್ನು ಮಾಡಬೇಡ ಎಂದು ಮಾತ್ರ ಹೇಳುತ್ತವೆ. ಹೀಗಾಗಿ, ಈ ಉಪದೇಶಗಳಿಂದ ಏನೂ ಪ್ರಯೋಜನವಿಲ್ಲ." ಹಾಗೂ ಇನ್ನೊಂದು ಪ್ರಶ್ನೆಯನ್ನು ಅವರು ಮುಂದಿಡುತ್ತಾರೆ. ಅದೇನೆಂದರೆ, ಕೇವಲ ಕದಿಯಬೇಡ ಎಂದು ಉಪದೇಶ ನೀಡಿದರೆ ಸಾಕೆ? ಮನುಷ್ಯ ಏಕೆ ಕದಿಯುತ್ತಿದ್ದಾನೆ ಎಂದು ಅರಿಯಬೇಡವೆ? ಮನುಷ್ಯ ಏಕೆ ಕದಿಯುತ್ತಾನೆ ಎಂದರೆ, ಕದಿಯುವ ಪ್ರವೃತ್ತಿ ಅವನ ಮನದಾಳದಲ್ಲಿ ಹುದುಗಿರುತ್ತದೆ; ಅಪ್ರಜ್ಞೆಯ ಸ್ತರದಲ್ಲಿ ಅದು ಸ್ವಯಂಚಾಲಿತವಾಗಿ ಕೆಲಸ ಮಾಡುತ್ತದೆ. ಈ ಅಪ್ರಜ್ಞೆಯ (unconscious) ಕೆಲಸವೇ ಮನಃಶಾಸ್ತ್ರದ ದೊಡ್ಡ ಸಮಸ್ಯೆ ಎನ್ನುತ್ತಾರೆ ಸ್ವಾಮೀಜಿ.

ಸ್ವಾಮೀಜಿಯವರು ಅಮೆರಿಕದಲ್ಲಿ ಸಂಚರಿಸುತ್ತಿದ್ದ ಕಾಲದಲ್ಲಿ, ಈ ನಿಟ್ಟಿನಲ್ಲಿ ಅನೇಕ ಹೊಸ ಹೊಸ ಸಂಶೋಧನೆಗಳು ನಡೆದು, ಅವುಗಳ ಫಲಿತಾಂಶಗಳು ಪ್ರಕಟವಾಗುತ್ತಿದ್ದವು. ಡಾರ್ವಿನ್ನನ ವಿಕಾಸವಾದವಾಗಲಿ, ಮನಃಶಾಸ್ತ್ರಕ್ಕೆ ಸಂಬಂಧಪಟ್ಟ ಸಂಶೋಧನೆಗಳಾಗಲಿ ಅಥವಾ ಶೊಪನ್‌ಹೆವರ್, ಕ್ಯಾಂಟ್ ಮುಂತಾದವರ ತತ್ತ್ವಶಾಸ್ತ್ರ ಚಿಂತನೆಯಾಗಲಿ – ಇವೆಲ್ಲವನ್ನೂ ಸ್ವಾಮೀಜಿ ಕೂಲಂಕಷವಾಗಿ ಅಧ್ಯಯನ ಮಾಡುತ್ತಿದ್ದರು ಮತ್ತು ವೈಜ್ಞಾನಿಕವಾಗಿ ಗ್ರಹಿಸುತ್ತಿದ್ದರು. ಅಷ್ಟೇ ಅಲ್ಲದೆ, ಈ ಗ್ರಹಿಕೆಯ ಆಧಾರದ ಮೇಲೆ, ಭವಿಷ್ಯದಲ್ಲಿ ಈ ಸಂಶೋಧನೆಗಳು ಪಡೆಯಬಹುದಾದ ಸ್ಥೂಲರೂಪಗಳನ್ನು ಕುಳಿತು ದಾರ್ಶನಿಕವಾಗಿ ವಿವರಿಸುತ್ತಿದ್ದರು. ಮನಸ್ಸಿನ ನೇತ್ಯಾತ್ಮಕ ಪ್ರವೃತ್ತಿಗಳನ್ನು ಕುರಿತು ಭಾರತೀಯ ಆಧ್ಯಾತ್ಮಿಕ ಪರಂಪರೆ ಕಂಡುಹಿಡಿದಿರುವ ಅಂಶಗಳನ್ನು ಕರಗತ ಮಾಡಿಕೊಂಡಿದ್ದ ಸ್ವಾಮೀಜಿಯವರಿಗೆ, ಪಾಶ್ಚಾತ್ಯರ ಮನಃಶಾಸ್ತ್ರೀಯ ಜ್ಞಾನವು ಸರ್ವೇಸಾಧಾರಣವಾಗಿ ಕಂಡಿರಬೇಕು. ಆದರೂ ಸ್ವಾಮೀಜಿ, ಭಾರತೀಯ ಪರಂಪರೆಯ ಸೂಕ್ಷ್ಮ ವಿಚಾರಗಳನ್ನು, ಪಾಶ್ಚಾತ್ಯರಿಗೆ ಪರಿಚಯವಾಗಿದ್ದ ಮನಃಶಾಸ್ತ್ರೀಯ ಪರಿಭಾಷೆಯಲ್ಲೇ ಅವರಿಗೆ ವಿವರಿಸುತ್ತಿದ್ದರು. ಇದಕ್ಕೊಂದು ಉದಾಹರಣೆಯನ್ನು ಹೀಗೆ ನೀಡಬಹುದು. ನಮ್ಮ ಕ್ರಿಯೆಗೆ ಕಾರಣವಾದ ಅಪ್ರಜ್ಞೆಯ ಸ್ತರವನ್ನು ಕುರಿತು ಸ್ವಾಮೀಜಿ ಹೀಗೆ ವಿವರಿಸುತ್ತಾರೆ: "ಮೊಟ್ಟಮೊದಲನೆಯದಾಗಿ ನಾವು ಮನಸ್ಸಿನಾಳದೊಳಗೆ ಹುದುಗಿಹೋಗಿರುವ ನಮ್ಮ